# ಗಾಂಧಿನಗರ ಪೋಸ್ಟ್

## ಮಹೇಶ್‌ರ ಪಂಚಾಮೃತ

‘ಎಂಎಂಸಿಎಚ್’ – ಈ ಶೀರ್ಷಿಕೆಯ ಅರ್ಥವೇನು? ಉತ್ತರಕ್ಕಾಗಿ ಸಿನಿಮಾ ನೋಡಿ ಎನ್ನುತ್ತಾರೆ ನಿರ್ದೇಶಕ ಮುಸ್ಸಂಜೆ ಮಹೇಶ್ (ಜುಲೈ 13ರಂದು ತೆರೆಗೆ).

ಚಿತ್ರದಲ್ಲಿ ಐವರು ಚೆಲುವೆಯರು ನಟಿಸಿದ್ದಾರೆ. ಈ ಚೆಲುವೆಯರ ಹೆಸರುಗಳನ್ನು ಶೀರ್ಷಿಕೆ ಸೂಚಿಸಬಹುದು, ಊರಿನ ಹೆಸರನ್ನೋ ಕಥೆಯನ್ನೋ ಸೂಚಿಸಬಹುದು ಎಂದು ಮಹೇಶ್ ಮಾರ್ಮಿಕವಾಗಿ ಹೇಳುತ್ತಾರೆ. ಸದ್ಯಕ್ಕೆ ಅವರು ಬಿಟ್ಟುಕೊಟ್ಟಿರುವ ಗುಟ್ಟು ಇಷ್ಟೇ. ಐವರು ಹುಡುಗಿಯರ ಗೆಳೆತನದ ಕಥೆ ಚಿತ್ರದ ಕೇಂದ್ರ. ತಮಾಷೆಯ ಜೊತೆಗೆ ಸಸ್ಪೆನ್ಸ್ ಹಾಗೂ ಥ್ರಿಲ್ಲಿಂಗ್ ಅಂಶಗಳು ಸಿನಿಮಾದಲ್ಲಿದೆಯಂತೆ.

ರಾಗಿಣಿ ದ್ವಿವೇದಿ, ಮೇಘನಾ ರಾಜ್, ಸಂಯುಕ್ತಾ ಹೊರನಾಡು, ಪ್ರಥಮಾ ಪ್ರಸಾದ್ ಹಾಗೂ ನಕ್ಷತ್ರಾ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಕಲಾವಿದೆಯರು. ಇವರಲ್ಲಿ ಪ್ರಥಮಾ ಪ್ರಸಾದ್ ನಟಿ ವಿನಯಾಪ್ರಸಾದ್ ಅವರ ಪುತ್ರಿ. ರಾಗಿಣಿ ಸಿಟಿ ಕ್ರೈಂ ಬ್ರ್ಯಾಂಚ್‌ನ ಸೂಪರ್ ಕಾಪ್ ಪಾತ್ರದಲ್ಲಿ ನಟಿಸಿದ್ದಾರಂತೆ. ತೊಂಬತ್ತರ ದಶಕದಲ್ಲಿ ಮೈಸೂರಿನಲ್ಲಿ ನಡೆದ ನೈಜ ಕಥೆಯೊಂದನ್ನು ಸಿನಿಮಾ ಆಧರಿಸಿದೆಯಂತೆ. ವಿ.ಶ್ರೀಧರ್ ಸಂಭ್ರಮ್ ಸಂಗೀತ ಸಂಯೋಜನೆ ಹಾಗೂ ನಾಗೇಶ್ ಆಚಾರ್ಯ ಛಾಯಾಗ್ರಹಣ ಚಿತ್ರಕ್ಕಿದೆ.







## ಟ್ರಂಕೊಳಗಿನ ನೆಳಲು-ಬೆಳಕು!

ಭಾರತೀಯ ಚಿತ್ರರಂಗದಲ್ಲಿ ಪ್ರಸಿದ್ಧರಾದ ಕನ್ನಡ ನಿರ್ದೇಶಕರಲ್ಲಿ ಜಿ.ವಿ. ಅಯ್ಯರ್ ಕೂಡ ಒಬ್ಬರು. ಅವರ ಕುಟುಂಬಕ್ಕೆ ಸೇರಿದ ರಿಷಿಕಾ ಶರ್ಮಾ ನಿರ್ದೇಶಿಸಿರುವ ಚಿತ್ರದ ಹೆಸರು ‘ಟ್ರಂಕ್’. ವೈಶಾಲಿ ದೀಪಕ್ ಹಾಗೂ ನಿಹಾಲ್ ತಾರಾಗಣದಲ್ಲಿರುವ ಪ್ರಮುಖರು.

‘ಟ್ರಂಕ್’ ಹಾರರ್ ಕಥೆಯನ್ನೊಳಗೊಂಡಿರುವ ಸಿನಿಮಾ. ಉತ್ತರ ಕರ್ನಾಟಕದಲ್ಲಿ ನಡೆದ ನೈಜ ಘಟನೆಯೊಂದನ್ನು ಆಧರಿಸಿ ರಿಷಿಕಾ ಸಿನಿಮಾ ಮಾಡಿದ್ದಾರೆ. ದೆವ್ವ ‘ಟ್ರಂಕ್’ನಿಂದ ಹೊರಬರಲಿದೆಯೇ ಎಂದು ಕೇಳಿದರೆ ನಿರ್ದೇಶಕಿ ಸ್ಪಷ್ಟ ಉತ್ತರವನ್ನೇನೂ ನೀಡುವುದಿಲ್ಲ. ದೆವ್ವ ಇದೆ ಅಥವಾ ಇಲ್ಲ ಎನ್ನುವ ತೀರ್ಮಾನವನ್ನು ಕೊಡಲೂ ಅವರು ಸಿದ್ಧರಿಲ್ಲ. ಆ ತೀರ್ಮಾನವನ್ನು ಪ್ರೇಕ್ಷಕರ ತೀರ್ಮಾನಕ್ಕೆ ಬಿಡಲು ನಿರ್ಧರಿಸಿದ್ದಾರೆ.

ದೆವ್ವದ ಬಗ್ಗೆ ತಮ್ಮ ತೀರ್ಮಾನವನ್ನು ಹೇಳದೇ ಹೋದರೂ ಋಣಾತ್ಮಕ ಶಕ್ತಿಯೊಂದರ ಅಸ್ತಿತ್ವವನ್ನು ಅವರು ಅಲ್ಲಗಳೆಯುವುದಿಲ್ಲ. ತಮ್ಮ ಪರಿಚಿತ ಕುಟುಂಬವೊಂದು ಅವ್ಯಕ್ತ ಶಕ್ತಿಗಳಿಂದ ಸಮಸ್ಯೆ ಎದುರಿಸಿದ್ದನ್ನು ನೆನಪಿಸಿಕೊಳ್ಳುವ ಅವರು, ತಮ್ಮ ಗೊಂದಲಗಳನ್ನು ಸಿನಿಮಾ ಕಥೆಯ ಮೂಲಕ ನಿರೂಪಿಸಲು ಹೊರಟಿದ್ದಾರೆ. ತಮ್ಮ ನಂಬಿಕೆಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ಚಿತ್ರಿಸಲು ಅವರು ಯತ್ನಿಸಿದ್ದಾರಂತೆ.

ಹೊಸಬರ ಪ್ರಯತ್ನವನ್ನು ಬೆಂಬಲಿಸಿ ಎಂದು ಪ್ರೇಕ್ಷಕರನ್ನು ಕೋರುವ ರಿಷಿಕಾ, ತಮ್ಮ ತಂಡದ ಪ್ರಾಮಾಣಿಕ ಪ್ರಯತ್ನ ಚಿತ್ರರಸಿಕರಿಗೆ ಇಷ್ಟವಾಗಲಿದೆ ಎನ್ನುವ ನಂಬಿಕೆ ಹೊಂದಿದ್ದಾರೆ. ಆಲ್ಬಿನ್ ಡೊಮಿನಿಕ್ ಹಿನ್ನೆಲೆ ಸಂಗೀತ ಹಾಗೂ ಭಜರಂಗ್ ಕೊನಥಮ್, ಸಂದೀಪ್ ಅಲುರಿ ಜೋಡಿಯ ಛಾಯಾಗ್ರಹಣ ಚಿತ್ರಕ್ಕಿದೆ.